# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:- 05/09/2022 ರಂದು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ 60 ಸಗಾಯಮರಂ ವಾರ್ಡ್ ಸಮಿತಿ ಸಭೆಯ ನಡುವಳಿ

**ಸಭೆಗೆ ಹಾಜರಿದ್ದ ಅಧಿಕಾರಿಗಳು :**

1. ಶ್ರೀ. ಮಲ್ಲಪ್ಪ ಭಜಂತ್ರಿ ನೋಡಲ್ ಅಧಿಕಾರಿಗಳು
2. ಶ್ರೀ. ಬಸವರಾಜು ವಾರ್ಡ್ ಸಹಾಯಕ ಅಭಿಯಂತರರು ಮತ್ತು ಸದಸ್ಯ ಕಾರ್ಯದರ್ಶಿ
3. ಶ್ರೀ. ಹೇಮಂತ್ ವಾರ್ಡ್ ಸಹಾಯಕ ಅಭಿಯಂತರರು
4. ಶ್ರೀ. ಮಲ್ಲಪ್ಪ ಕಿರಿಯ ಅಭಿಯಂತರರು ಬಿ.ಡಬ್ಲ್ಯೂ.ಎಸ.ಎಸ್.ಬಿ
5. ಶ್ರೀ. ನಾಗಭೂಷಣ ಕಿರಿಯ ಆರೋಗ್ಯ ಪರೀವಿಕ್ಷಕರು
6. ಶ್ರೀ. ಬಾಬು ಆರೋಗ್ಯ ದಫೇದಾರರು
7. ಶ್ರೀ. ಶೇಖರ ತೆರಿಗೆ ಪರೀವಿಕ್ಷಕರು
8. ಶ್ರೀ. ಪ್ರಭಾಕರ್ ಎ.ಎಸ್.ಐ ಪೊಲೀಸ್ ಠಾಣೆ
9. ಶ್ರೀ. ಮಂಜುನಾಥ ಕೆಲಸ ಪರೀವಿಕ್ಷಕರು ಬಿ.ಡಬ್ಲ್ಯೂ.ಎಸ.ಎಸ್.ಬಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯ ಕಾರ್ಯದರ್ಶಿ ಅಧಿಕಾರಿ ವಾರ್ಡ್-60 ರವರು ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿದರು. ವಾರ್ಡ್-60 ರ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಕಛೇರಿಯಲ್ಲಿ ನಡೆಸಲಾಯಿತು.

➢ **ಆರೋಗ್ಯ ಇಲಾಖೆಗೆ ಸಂಬಂದಿಸಿರುವುದು**

- ವಾರ್ಡ್ ವ್ಯಾಪ್ತಿಯಲ್ಲಿ ಪಿ.ಕೆ – 50, ಸೂಪರ್ ವೈಸರ್-1, ಅಟೋ – 16 ಕಾಂಪ್ಯಾಕ್ಟರ್ – 3 ಕೆಲಸ ನಿರ್ವಹಣೆಯಲ್ಲಿರುತ್ತವೆ ಎಂದು ಕಿರಿಯ ಆರೋಗ್ಯ ಪರೀವಿಕ್ಷಕರು ಎದ್ದು ನಿಂತು ನೋಡಲ್ ಅಧಿಕಾರಿಗಳಿಗೆ ವಿವರಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಪೌರಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ನಿವೃತ್ತಗೊಂಡಿರುವ ಬಗ್ಗೆ ವಾರ್ಡ್ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸಲು ತೊಂದರೆಯಾಗುತ್ತೀರುವ ಬಗ್ಗೆ ಹಿರಿಯ ಅಧಿಕಾರಿಗಳ ಗಮನಕ್ಕೆ ತರಲು ಸೂಚಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಕಸದ ಬ್ಲಾಕ್ ಸ್ಪಾಟ್‌ಗಳ್ಲಲಿ ಬ್ಲೀಚಿಂಗ್ ಪೌಡರ್ ಸಿಂಪಡಿಸಲು ಸೂಚಿಸಿದರು.
- ವಾರ್ಡ್ ವ್ಯಾಪ್ತಿಯ ರಿಚ್ಚರ್ಡ್ ಟೌನ್ ಕರ್ನ್ಸರ್ವೇನ್ಸಿಗಳನ್ನು ಸ್ವಚ್ಛಗೋಳಿಸಲು ಸೂಚಿಸಿದರು
- ವಾರ್ಡ್ ವ್ಯಾಪ್ತಿಯ ಫೂಟ್‌ಪಾತ್‌ಗಳ ಹುಲ್ಲು ತೇರೆವುಗೋಳಿಸಲು ಸೂಚಿಸಿದರು

**ಕ್ರಮ : ಈ ಮೇಲೆ ಸೂಚಿಸಿರುವ ಸಮಸ್ಯೆಗಳಿಗೆ ಶಿಘ್ರದಲ್ಲೆ ಪರಿಹರಿಸುವಂತೆ ಕಿರಿಯ ಆರೋಗ್ಯ ಪರೀವಿಕ್ಷಕರಿಗೆ ಸೂಚಿಸಲಾಯಿತು.**

➢ <u>ಕಂದಾಯ ಇಲಾಖೆಗೆ ಸಂಬಂಧಿಸಿರುವುದು</u>

- ವಾರ್ಡ್ ವ್ಯಾಪ್ತಿಯಲ್ಲಿನ ಕಂದಾಯ ವಸೂಲಾತಿ ಬಗ್ಗೆ ಬೇಡಿಕೆ ಹಾಗೂ ಪಾವತಿ ಬಾಕಿ ಇರುವ ವಿವರಗಳೊಂದಿಗೆ ಕಂದಾಯ ಪರಿವೀಕ್ಷಕರು / ಕಂದಾಯ ವಸೂಲಿಗಾರರು ಹಾಜರಾಗಲು ಸೂಚಿಸಿದೆ.

- ವಾರ್ಡ್ ವ್ಯಾಪ್ತಿಯಲ್ಲಿ ಬಾರಿ ಮಳೆಯಿಂದಾಗಿ ಸಾರ್ವಜನಿಕರಿಗೆ ಉಂಟಾಗಿರುವ ಹಾನಿ ಬಗ್ಗೆ ಸ್ಥಳ ಪರೀಶಿಲನೆ ಮಾಡಿ ಸ್ಥಳ ಮಹಜೂರ್ ನೀಡುವ ಕ್ರಮವನ್ನು ವೇಗಗೋಳಿಸಲು ಸೂಚಿಸಿದರು

**ಕ್ರಮ : ಈ ಮೇಲೆ ಸೂಚಿಸಿರುವ ಸಮಸ್ಯೆಗಳಿಗೆ ಶಿಘ್ರದಲ್ಲೆ ಪರಿಹರಿಸುವಂತೆ ತೆರಿಗೆ ಪರೀವಿಕ್ಷಕರಿಗೆ ಸೂಚಿಸಲಾಯಿತು.**

➢ <u>ಪೊಲೀಸ್ ಇಲಾಖೆಗೆ (ಟ್ರಾಫಿಕ್) ಸಂಬಂದಿಸಿರುವ್ರುದು</u>

- ವಾರ್ಡ್ ವ್ಯಾಪ್ತಿಯ ಲಿಂಗರಾಜಪುರಂ ಮೇಲ್‌ಸೇತುವೇ ಕೇಳ ಭಾಗದಲ್ಲಿ ವಾಹನಗಳು ಅನಧಿಕೃತವಾಗಿ ನೀಲುಗಡೆ ಮಾಡಿರುವ ಬಗ್ಗೆ ಕ್ರಮ ವಹಿಸಲು ಸೂಚಿಸಿದರು
- ವಾರ್ಡ್ ವ್ಯಾಪ್ತಿಯ ಮುಖ್ಯ ರಸ್ತೆಗಳಲ್ಲಿ ಸಿ.ಸಿ ಕ್ಯಾಮೇರಾ ಅಳವಡಿಸಲು ಸೂಚಿಸಿದರು.

**ಕ್ರಮ : ಈ ಮೇಲೆ ಸೂಚಿಸಿರುವ ಸಮಸ್ಯೆಗಳಿಗೆ ಶಿಘ್ರದಲ್ಲೆ ಪರಿಹರಿಸುವಂತೆ ಪೊಲೀಸ್ ಎ.ಎಸ್.ಐ ರವರಿಗೆ ಸೂಚಿಸಲಾಯಿತು.**

➢ <u>ಕಾಮಗಾರಿ ಇಲಾಖೆಗೆ ಸಂಬಂದಿಸಿರುವುದು</u>

- ವಾರ್ಡ್ ವ್ಯಾಪ್ತಿಯ ಕೂಕ್ಸನ್ ರಸ್ತೆ, ರೋಜರ್ಸ್ ರಸ್ತೆ ಮತ್ತು ವಿವಿಯಾನಿ ರಸ್ತೆಯ ಡಾಂಬರೀಕರಣ ಕೆಲಸವನ್ನು ಕೂಡಲೇ ಪೂರ್ಣಗೊಳಿಸಲು ಸೂಚಿಸದರು.
- ವಾರ್ಡ್ ವ್ಯಾಪ್ತಿಯ ರಿಚ್ಚರ್ಡ್ ಟೌನ್ ಸುತ್ತಮುತ್ತಲಿನ ಮೋರಿ ಮತ್ತು ಫೂಟ್‌ಪಾತ್‌ಗಳನ್ನು ಸರಿಪಡಿಸಲು & ಸ್ವಚ್ಛಗೋಳಿಸಲು ಸೂಚಿಸಿದರು.
- ವಾರ್ಡ್ ವ್ಯಾಪ್ತಿಯ ಪಾಟರಿ ರಸ್ತೆ ಮತ್ತು ಪಿಳ್ಳಣ್ಣ ಗಾರ್ಡ್‌ನ್ ರಸ್ತೆಗಳಲ್ಲಿ ಡೇಬ್ರಸ್ ತೇರೆವುಗೋಳಿಸಲು ಸೂಚಿಸಿದರು.

**ಕ್ರಮ : ಈ ಮೇಲೆ ಸೂಚಿಸಿರುವ ಸಮಸ್ಯೆಗಳಿಗೆ ಶಿಘ್ರದಲ್ಲೆ ಪರಿಹರಿಸುವಂತೆ ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು ಮತ್ತು ಈ ಮೇಲಿನ ಕಾಮಗಾರಿಗಳನ್ನು ಈಗಾಗಲೇ ಟೇಂಡರ್ ಪ್ರೋಸೆಸ್‌ನಲ್ಲಿ ಇರುತ್ತವೆ ಹಾಗೂ ಆದ್ಯತೆ ಮೇಲೆ ಕಾರ್ಯನಿರ್ವಹಿಸಲಾಗುವುದು ಎಂದು ಪ್ರತಿಕ್ರಿಯೆ ನೀಡಿದರು.**

➢ <u>ಅರಣ್ಯ ಇಲಾಖೆಗೆ ಸಂಬಂದಿಸಿರುವುದು</u>

- ವಾರ್ಡ್ ವ್ಯಾಪ್ತಿಯ ರಿಚ್ಚರ್ಡ್ ಟೌನ್ ಸುತ್ತಮುತ್ತಲಿನ ಮರಗಳಲ್ಲಿನ ನಿರ್ಜೀವವಾದ ರೆಂಬೆ ಕೊಂಬೆಗಳಿದ್ದು ಇವುಗಳನ್ನು ಕೂಡಲೆ ತೇರುವುಗೋಳಿಸಲು ಸೂಚಿಸಿದರು.

**ಕ್ರಮ : ಈ ಮೇಲೆ ಸೂಚಿಸಿರುವಂತಹ ಸಮಸ್ಯೆಗೆ ಪರಿಹರಿಸುವಂತೆ ಅರಣ್ಯಾಧಿಕಾರಿಗಳಿಗೆ ಈ ಸಭೆ ಮುಂಖಾಂತರ ಸೂಚಿಸಲಾಯಿತು.**

➢ <u>ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಗೆ ಸಂಬಂಧಿಸಿರುವುದು</u>

- ವಾರ್ಡ್ ವ್ಯಾಪ್ತಿಯಲ್ಲಿನ ಹೊಸ ಬಾಗಲೂರು ಬಡಾವಣೆ, ಹಳೆ ಬಾಗಲೂರು ಬಡಾವಣೆ ಮತ್ತು ಪಿಳ್ಳಣ್ಣ ಗಾರ್ಡ್‌ನ್ ಸುತ್ತಮುತ್ತಲಿನ ಪ್ರದೇಶದಲ್ಲಿ ಕುಡಿಯುವ ನೀರಿನ ಪುರೈಕೆಯಲ್ಲಿ ವ್ಯತ್ಯವಿದ್ದು ಕೂಡಲೆ ಪರಿಹರಿಸಲು ಸೂಚಿಸಿದರು.

- ವಾರ್ಡ್ ವ್ಯಾಪ್ತಿಯಲ್ಲಿನ ಹೊಸ ಬಾಗಲೂರು ಬಡಾವಣೆ, ಹಳೆ ಬಾಗಲೂರು ಬಡಾವಣೆ ಮತ್ತು ಪಿಳ್ಳಣ್ಣ ಗಾರ್ಡ್‌ನ್, ರಿಚ್ಚ್‌ರ್ಡ್ ಟೌನ್ ಸುತ್ತಮುತ್ತಲಿನ ಪ್ರದೇಶದಲ್ಲಿ ಒಳಚರಂಡಿ ನವೀಕರಣಗೋಳಿಸಲು ಸೂಚಿಸಿದರು

**ಕ್ರಮ : ಈ ಮೇಲೆ ಸೂಚಿಸಿರುವ ಸಮಸ್ಯೆಗಳಿಗೆ ಶಿಘ್ರದಲ್ಲೆ ಪರಿಹರಿಸಲು ಕಿರಿಯ ಅಭಿಯಂತರರಿಗೆ ಸೂಚಿಸಿದರು.**

➢ **ತೋಟಗಾರಿಕೆ ಇಲಾಖೆಗೆ ಸಂಬಂಧಿಸಿರುವುದು**

- ವಾರ್ಡ್ ವ್ಯಾಪ್ತಿಯಲ್ಲಿ ಒಳಪಡುವ ಪಾರ್ಕ್‌ಗಳನ್ನು ನವೀಕರಣ ಹಾಗೂ ಎಲೆ ಕತ್ತರಿಸುವ ಮಿಷನ್ನು (ಶೆಡ್ಡರರ್) ಕೂಡಲೆ ನವೀಕರಣಗೋಳಿಸಲು ಸೂಚಿಸಿದರು.

**ಕ್ರಮ : ಈ ಮೇಲೆ ಸೂಚಿಸಿರುವ ಸಮಸ್ಯೆಗಳಿಗೆ ಶಿಘ್ರದಲ್ಲೆ ಪರಿಹರಿಸುವಂತೆ ತೋಟಗಾರಿಕೆ ಈ ಸಭೆ ಮುಂಖಾಂತರ ಸೂಚಿಸಲಾಯಿತು.**

➢ **ಪೊಲೀಸ್ ಇಲಾಖೆಗೆ (ಸಿವಿಲ್) ಸಂಬಂದಿಸಿರುವುದು**

- ವಾರ್ಡ್ ವ್ಯಾಪ್ತಿಯಲ್ಲಿ ಗಾಂಜಾ ಹಾಗೂ ಮದ್ಯ ಕುಡಿಯುವುದು ಹಾಗೂ ನಿಲುಗಡೆ ವಾಹನಗಳಿಗೆ ಹಾನಿ ಉಂಟು ಮಾಡುವುದು,... ಇನ್ನೂ ಇತರೆ ಅಸ್ಯೆಂಗಿಕ ಕಾರ್ಯಾಚರಣೆ ನಡೆಯುತ್ತಿದ್ದು ಇವುಗಳ ಮೇಲೆ ಕೂಡಲೆ ಕ್ರಮ ಕೈಗೊಳ್ಳಲು ಸೂಚಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಹತ್ತಿರ ರಾತ್ರಿ ವೇಳೆಯಲ್ಲಿ ಮದ್ಯ ಕುಡಿದು ಕಿಟಕಿ ಒಡೆದು ಹಾಕುವುದು ಹೆಚ್ಚಾಗುತ್ತಿದ್ದು ಪೊಲೀಸ್ ಬೀಟ್ ಹಾಕುವುದನ್ನು ಹೆಚ್ಚಿಸಲು ಅಧಿಕಾರಿ ವರ್ಗದವರಿಗೆ ಸೂಚಿಸಿದರು.

**ಕ್ರಮ : ಈ ಮೇಲೆ ಸೂಚಿಸಿರುವ ಸಮಸ್ಯೆಗಳಿಗೆ ಶಿಘ್ರದಲ್ಲೆ ಪರಿಹರಿಸುವಂತೆ ಈ ಸಭೆ ಮುಖಾಂತರ ಸೂಚಿಸಲಾಯಿತು.**

➢ **ವಿದ್ಯುತ್ ಇಲಾಖೆಗೆ ಸಂಬಂದಿಸಿರುವುದು**

- ವಾರ್ಡ್ ವ್ಯಾಪ್ತಿಯಲ್ಲಿನ ಹಾಲ್ ರಸ್ತೆ, ಪಿಳ್ಳಣ್ಣ ಗಾರ್ಡ್‌ನ್ ವಿವಿಯಾನಿ ರಸ್ತೆ, ಲಿಂಗರಾಜಪುರಂ ಮೇಲ್‌ಸೇತುವೆ, ಹಳೆ ಬಾಗಲೂರು ಬಡಾವಣೆ ಮತ್ತು ಹೊಸಾ ಬಾಗಲೂರು ಬಡಾವಣೆ ಸುತ್ತಮುತ್ತಲಿನ ಪ್ರದೇಶಗಳ್ಲಲಿ ಸ್ಟ್ರಿಟ್ ಲೈಟ್‌ಗಳನ್ನೂ ಕೂಡಲೆ ಸರಿಪಡಿಸಬೇಕೆಂದು ಸೂಚಿಸಿದೆ.

**ಕ್ರಮ : ಈ ಮೇಲೆ ಸೂಚಿಸಿರುವ ಸಮಸ್ಯೆಗಳಿಗೆ ಶಿಘ್ರದಲ್ಲೆ ಪರಿಹರಿಸಲು ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ (ವಿದ್ಯುತ್ ) ಈ ಸಭೆ ಮುಖಾಂತರ ಸೂಚಿಸಿದರು.**

ಈ ಎಲ್ಲಾ ವಿಷಯಗಳ ಬಗ್ಗೆ ತುರ್ತಾಗಿ ಕ್ರಮ ಕೈಗೊಳ್ಳಲು ಸಂಬಂದಪಟ್ಟವರಿಗೆ ಸೂಚಿಸುತ್ತಾ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದೆ.

**ನೋಡಲ್ ಅಧಿಕಾರಿ/ ಸದಸ್ಯ ಕಾರ್ಯದರ್ಶಿ**
**ವಾರ್ಡ್–60**

ಪ್ರತಿಗಳನ್ನು:

1. ಮಾನ್ಯ ಆಡಳಿತಾಧಿಕಾರಿ, ಬಿ.ಬಿ.ಎಂ.ಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ವಲಯ ಆಯುಕ್ತರು ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ಜಂಟಿ ಆಯುಕ್ತರು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ
4. ಮುಖ್ಯ ಅಭೀಯಂತರರು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಕಾರ್ಯಪಾಲಕ ಅಭಿಯಂತರರು, ಪುಲಿಕೇಶಿನಗರ ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆ.ಜಿ.ಹಳ್ಳಿ ಉಪ-ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನ ತ್ಯಾಜ್ಯ) ಪುಲಕೇಶಿನಗರ ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
8. ಸಹಾಯಕ ಕಂದಾಯ ಅಧಿಕಾರಿ (ಕೆ.ಜಿ. ಹಳ್ಳಿ) ಉಪವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ) ರವರ ಮಾಹಿತಿಗಾಗಿ ಸಲ್ಲಿಸಿದೆ.
10. ಅಧೀಕ್ಷಕರು, (ತೋಟಗಾರಿಕೆ ಇಲಾಖೆ), ರವರ ಮಾಹಿತಿಗಾಗಿ ಸಲ್ಲಿಸಿದೆ.
11. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, (ರಸ್ತೆ ಮತ್ತು ಮೂಲಭೂತ ಸೌಕರ್ಯ) ರವರ ಮಾಹಿತಿಗಾಗಿ ಸಲ್ಲಿಸಿದೆ.
12. ಸಹಾಯಕ ಕಾರ್ಯಪಾಲಕ ಅಭಿಯಂತರರು (ಎಲೆಕ್ಟ್ರಿಕಲ್) ಬಿ.ಬಿ.ಎಂಪಿ. ಮೆಯೋಹಾಲ್ ರವರ ಮಾಹಿತಿಗಾಗಿ ಸಲ್ಲಿಸಿದೆ
13. ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ನೇತಾಜಿ ರಸ್ತೆ, ರವರ ಮಾಹಿತಿಗಾಗಿ ಸಲ್ಲಿಸಿದೆ.
14. ಪೊಲೀಸ್ ಇನ್ಸ್‌ಪೆಕ್ಟರ್ (ಸಿವಿಲ್) ಕೆ.ಜಿ.ಹಳ್ಳಿ ರವರ ಮಾಹಿತಿಗಾಗಿ ಸಲ್ಲಿಸಿದೆ.
15. ಪೊಲೀಸ್ ಇನ್ಸ್‌ಪೆಕ್ಟರ್ (ಸಿವಿಲ್) ಪುಲಿಕೇಶಿನಗರ ರವರ ಮಾಹಿತಿಗಾಗಿ ಸಲ್ಲಿಸಿದೆ.
16. ಪೊಲೀಸ್ ಇನ್ಸ್‌ಪೆಕ್ಟರ್ (ಟ್ರಾಫಿಕ್) ಕೆ.ಜಿ.ಹಳ್ಳಿ ರವರ ಮಾಹಿತಿಗಾಗಿ ಸಲ್ಲಿಸಿದೆ.
17. ಪೊಲೀಸ್ ಇನ್ಸ್‌ಪೆಕ್ಟರ್(ಟ್ರಾಫಿಕ್) ಪುಲಿಕೇಶಿನಗರ ರವರ ಮಾಹಿತಿಗಾಗಿ ಸಲ್ಲಿಸಿದೆ.
18. ವಲಯ ಅರಣ್ಯಾಧಿಕಾರಿಗಳು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ.
19. ಕಛೇರಿ ಪ್ರತಿ.